/VishwavaniNews epaper.vishwavani.news/ vishwavani.news
ಬೆಂಗಳೂರು • ಮಂಗಳೂರು • ಕಲಬುರಗಿ • ಬೆಳಗಾವಿ • ಹುಬ್ಬಳ್ಳಿ • ದಾವಣಗೆರೆ
ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬಂದಿರುವುದು ಸಂತಸದ ಬೆಳವಣಿಗೆ. ಗ್ರಾಮೀಣ ಭಾಗದ ಶಿಕ್ಷಕರ ಸಮಸ್ಯೆಗಳಿಗೆ ಬೆನ್ನೆಲುಬಾಗಿ ನಿಲ್ಲುವ ಜತೆಗೆ ಗ್ರಾಮೀಣ ಶಾಲೆಗಳ ಬೆಳವಣಿಗೆಗೆ ಶ್ರಮಿಸಿ ಗ್ರಾಮೀಣ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ

ಆರುವಯ್ಯಾ, ಎಂ.ಎಸ್. ರತ್ನಮ್ಮ, ಶೈಲಜಾ, ಎಚ್. ರಾಮಚಂದ್ರಯ್ಯ, ಎಂ.ಕೆ. ಪಾರ್ವತಮ್ಮ ಪ್ರತಿನಿಧಿಗಳಿಗೆ ನೇಮಕಾತಿ ಪತ್ರ ಹಸ್ತಾಂತರಿಸಲಾಯಿತು.

ರಾಮಂಜುನಪ್ಪ, ಪ್ರಾಶಾತಿ ಸಂಘದ ಮಾಜಿ ಅಧ್ಯಕ್ಷ ಜಿ.ವಿ.ಕುಮಾರ್, ಪರಮೇಶಯ್ಯ, ಬಿ. ಶಿವಕುಮಾರ್, ಎನ್. ನಾಗರಾಜು, ಲಕ್ಷ್ಮಣ ತೀರ್ಥ ಸೇರಿ ಹಲವರು ಉಪಸ್ಥಿತರಿದ್ದರು.

# ಮಾನವನ ಅತಿರೇಕ, ಪ್ಲಾಸ್ಟಿಕ್ ಬಳಕೆ ಪರಿಸರಕ್ಕೆ ಹಾನಿ

**ಬೆಂಗಳೂರು:** ಮಾನವನ ಅತಿರೇಕ, ಪರಿಸರಕ್ಕೆ ಹಾನಿ, ಮಿತಿಮೀರಿದ ಪ್ಲಾಸ್ಟಿಕ್‌ಬಳಕೆ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಅಲ್ಲದೆ ಅನಾವೃಷ್ಟಿ, ಅಂತರ್‌ಜಲದ ಕ್ಷೀಣತೆ, ಪ್ರಾಣಿ ಸಂಕುಲಕ್ಕೆ ಮಾರಕವಾಗಿದೆ ಎಂದು ವಲಯ ಅರಣ್ಯಾಧಿಕಾರಿ ವಿ. ಗಣೇಶ್ ಆತಂಕ ವ್ಯಕ್ತಪಡಿಸಿದರು.

ವಲಯ ಅರಣ್ಯಾಧಿಕಾರಿ ವಿ. ಗಣೇಶ್ ಆತಂಕ

ಸ್ವಚ್ಛ ಭಾರತ್ ಅಭಿಯಾನ

ದಿ ಆಕ್ಸ್ ಫರ್ಡ್ ವಿಜ್ಞಾನ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ಮತ್ತು ಬನ್ನೇರುಘಟ್ಟ ವನ್ಯಜೀವಿ ವಲಯದ ಸಹಯೋಗದೊಂದಿಗೆ, ಬನ್ನೇರುಘಟ್ಟ ವನ್ಯಜೀವಿ ವಲಯ, ಕಲ್ಕೆರೆ, ಬೆಂಗಳೂರು ಕೇಂದ್ರದಲ್ಲಿ ಆಯೋಜಿಸಿದ್ದ ಸ್ವಚ್ಛ ಭಾರತ್ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಾನವನ ಅತಿ ಆಸೆಯಿಂದ ಪರಿಸರ ಹಾಳಾಗುತ್ತಿದೆ. ಪ್ಲಾಸ್ಟಿಕ್ ಬಳಕೆ ಹೆಚ್ಚುತ್ತಿದ್ದು, ಅದನ್ನು ಸಿಕ್ಕಸಿಕ್ಕ ಕಡೆಗಳಲ್ಲಿ ಬಿಸಾಡುವ ಪ್ರವೃತ್ತಿ ಹೆಚ್ಚುತ್ತಿದೆ. ಇದನ್ನು ಮಿತಿಗೊಳಿಸಿ, ಜಾಗೃತಿ ಮೂಡಿಸುವುದು ಮತ್ತು ಆರೋಗ್ಯಕರ ಪರಿಸರ ನಿರ್ಮಾಣ ಕಾರ್ಯದಲ್ಲಿ ಸ್ವಯಂ ಸೇವಕರ ಪಾತ್ರ ಬಹುಮುಖ್ಯವಾದದ್ದು ಎಂದರು.

ವನ್ಯಜೀವಿ ವಲಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ಲಾಸ್ಟಿಕ್ ತೆರವುಗೊಳಿಸಲಾಯಿತು. ಪ್ರಾಂಶುಪಾಲ ಡಾ. ಆರ್. ಕಾವ್ಯಶ್ರೀ, ಕಾರ್ಯಕ್ರಮಾಧಿಕಾರಿ ಮರಿಸ್ವಾಮಿ ಎನ್, ಅರಣ್ಯ ಸಂರಕ್ಷಕರು ಮತ್ತು ಸಿಬ್ಬಂದಿ ವರ್ಗ ಹಾಗೂ ಎನ್ ಎಸ್‌ಎಸ್ ಸ್ವಯಂ ಸೇವಕರು ಇದ್ದರು.



ಸ್ವಚ್ಛ ಭಾರತ್ ಅಭಿಯಾನ ಕಾರ್ಯಕ್ರಮದಲ್ಲಿ ವಲಯ ಅರಣ್ಯಾಧಿಕಾರಿ ವಿ. ಗಣೇಶ್ ಮತ್ತು ಸಿಬ್ಬಂದಿ, ದಿ ಆಕ್ಸ್ ಫರ್ಡ್ ವಿಜ್ಞಾನ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಸ್ವಯಂಸೇವಕರು ಭಾಗವಹಿಸಿ ಪ್ಲಾಸ್ಟಿಕ್ ತೆರವುಗೊಳಿಸಿದರು.